ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	554
ಸದಸ್ಯರ ಹೆಸರು :	ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ:	18.07.2019
ಉತ್ತರಿಸುವ ಸಚಿವರು :	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಹೊನಕೆರೆ ಹೋಬಳಿ ಗಂಗಸಮುದ್ರ ಎಲ್ಲೆ ಸರ್ವೆ ನಂ: 143ರಲ್ಲಿ ಮತ್ತು ಶ್ಯಾನುಬೋಗನಹಳ್ಳಿ ಗ್ರಾಮದ ಎಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುತ್ತದೆ. ನಾಗಮಂಗಲ ತಾಲ್ಲೂಕು ಹೊನಕೆರೆ ಹೋಬಳಿ ಗಂಗಸಮುದ್ರ ಮತ್ತು ಶ್ಯಾನಬೋಗನಹಳ್ಳಿ ಗ್ರಾಮದಲ್ಲಿ ಚಾಲ್ತಿಯಲ್ಲಿರುವ ಕಲ್ಲುಗಣಿ ಗುತ್ತಿಗೆಗಳಿಗೆ ಗುತ್ತಿಗೆಯ ಪ್ರದೇಶದಲ್ಲಿ ಮತ್ತು ಗುತ್ತಿಗೆಯ ಹೊರಭಾಗದಲ್ಲಿ ಅನಧಿಕೃತ ಗಣಿಗಾರಿಕೆ ನಡೆದಿರುವ ಬಗ್ಗೆ ಹಾಗೂ ರಾಜಧನ ಪಾವತಿಸಿರುವ ಸೂಕ್ತ ದಾಖಲೆಗಳೊಂದಿಗೆ ಸಮಜಾಯಿಷಿ ನೀಡಲು ನೋಟೀಸ್ ಜಾರಿ ಮಾಡಲಾಗಿರುತ್ತದೆ. ಸದರಿ ಗುತ್ತಿಗೆ ಪ್ರದೇಶಗಳಲ್ಲಿ ತೆಗೆದಿರುವ ಖನಿಜ ಪ್ರಮಾಣವನ್ನು ವೈಜ್ಞಾನಿಕವಾಗಿ Drone/DGPS ಉಪಕರಣಗಳೊಂದಿಗೆ ಸರ್ವೆ ನಡೆಸಿ ಅಂದಾಜಿಸಲು ಕ್ರಮವಹಿಸಲಾಗುತ್ತಿದೆ. ಮುಂದುವರೆದು, ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ಶ್ಯಾನಬೋಗನಹಳ್ಳಿ ಗ್ರಾಮದಲ್ಲಿ ದಿನಾಂಕ:01-08-2018 ರಂದು ಸ್ಥಳ ಪರಿಶೀಲನೆ ನಡೆಸಲಾಗಿರುತ್ತದೆ. ಸ್ಥಳ ಪರಿಶೀಲನಾ ಸಮಯದಲ್ಲಿ ಸರ್ವೆ ನಂ: 18ರ 5-00 ಎಕರೆ ಪ್ರದೇಶದಲ್ಲಿ ಶ್ರೀ ಸಿ.ಕೆ.ದೇವರಾಜು ಎಂಬುವವರು ಅನಧಿಕೃತವಾಗಿ ಕಲ್ಲುಗಣಿಗಾರಿಕೆ ನಡೆಸಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಮಾನ್ಯ ಜೆ.ಎಂ.ಎಫ್.ಸಿ.ನ್ಯಾಯಾಲಯ, ನಾಗಮಂಗಲ ಇಲ್ಲಿ ಖಾಸಗಿ ದೂರು ಸಂಖ್ಯೆ75/2018 ದಿ:01-08-2018ನ್ನು ದಾಖಲಿಸಲಾಗಿರುತ್ತದೆ.
ಆ)	ಹಾಗಿದ್ದಲ್ಲಿ, ಈ ಗ್ರಾಮಗಳ ಸರ್ವೆ ನಂಬರ್‌ಗಳಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿರುವ ಮಾಲೀಕರ ಹೆಸರು ಮತ್ತು ಅವರ ನಡೆಸುತ್ತಿರುವ ಗಣಿಗಾರಿಕೆ ಜಮೀನಿನ ವಿಸ್ತೀರ್ಣ ಎಷ್ಟು; ಇದರಲ್ಲಿ ಅಕ್ರಮವಾಗಿ ಸರ್ಕಾರದ ಎಷ್ಟು ಭಾಗ ಬಳಸಿಕೊಂಡಿದ್ದಾರೆ; ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದ್ದರೂ ಕ್ರಮಕೈಗೊಳ್ಳದೆ ಇರುವುದಕ್ಕೆ ಕಾರಣ ಮತ್ತು ಕೈಗೊಂಡಿರುವ ಕ್ರಮಗಳು ಯಾವುವು; (ಸಂಪೂರ್ಣ ವಿವರ ನೀಡುವುದು)	
ಇ)	ಪ್ರತಿ ದಿನ ರಾತ್ರಿ ಸಮಯ ಅಕ್ರಮವಾಗಿ ಗಣಿಗಾರಿಕೆಗೆ ಬಳಸುವ ಸಿಡಿಮದ್ದುಗಳಿಂದ ಸುತ್ತ-ಮುತ್ತ ವಾಸಿಸುವ ಗ್ರಾಮಗಳ ಮನೆಗಳು ಬಿರುಕುಗೊಂಡಿದ್ದು ಈ ಬಗ್ಗೆ ಗ್ರಾಮಸ್ಥರುಗಳು ನೀಡಿರುವ ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)	ಗ್ರಾಮಸ್ಥರ ದೂರುಗಳ ಹಿನ್ನೆಲೆಯಲ್ಲಿ ಕಲ್ಲುಗಣಿಗಾರಿಕೆಯಲ್ಲಿ ಅಕ್ರಮವಾಗಿ ಸ್ಫೋಟಕ ಬಳಸುತ್ತಿರುವ ಮತ್ತು ಅಕ್ರಮವಾಗಿ ಸ್ಫೋಟಕಗಳನ್ನು ಸಂಗ್ರಹಿಸಿದ್ದ ಮೇರೆಗೆ ಶ್ರೀ ಕರೀಗೌಡ, ಶ್ರೀ ಪುಟ್ಟೇಗೌಡ, ಶ್ರೀ ಮಂಜು ಹಾಗೂ ಶ್ರೀ ನಾಗೇಶ್‌ರವರುಗಳ ವಿರುದ್ಧ, ಸಕ್ಷಮ ಪ್ರಾಧಿಕಾರಿಗಳಾದ ಆರಕ್ಷಕ ಉಪನಿರೀಕ್ಷಕರು, ನಾಗಮಂಗಲ ಗ್ರಾಮಾಂತರ ಪೊಲೀಸ್ ಠಾಣೆ ರವರು Explosive Substances Act-1908ರಡಿ ದಿನಾಂಕ:20.09.2018ರಂದು ಮೊಕದಮ್ಮೆ ಸಂಖ್ಯೆ-0236/2018ನ್ನು ದಾಖಲಿಸಲಾಗಿರುತ್ತದೆ.

ಸಂಖ್ಯೆ: ಸಿಐ 160 ಎಂಎಂಎನ್ 2019

(ರಾಜಶೇಖರ ಬಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು.